# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 566**
**ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ**
**(ನಾಮನಿರ್ದೇಶನ ಹೊಂದಿದವರು)**
**ಉತ್ತರಿಸುವ ದಿನಾಂಕ : 20.08.2026**
**ಉತ್ತರಿಸುವ ಸಚಿವರು : ಗೃಹ ಸಚಿವರು**

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ನಕಲಿ ಜಾತಿ ಪ್ರಮಾಣ ಪತ್ರಗಳ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ನಕಲಿ ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳ ವರ್ಷವಾರು ಜಿಲ್ಲಾವಾರು ವಿವರವನ್ನು ಅನುಬಂಧ-ಅ ದಲ್ಲಿ ಒದಗಿಸಲಾಗಿದೆ.</td></tr>
<tr><td>(ಆ)</td><td>ಈ ಪ್ರಕರಣಗಳ ಪೈಕಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (C.R.E Cell) ತನಿಖೆಗೆ ಒಳಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಪ್ರಕರಣಗಳು ತನಿಖೆಯ ವಿವಿಧ ಹಂತಗಳಲ್ಲಿವೆ;</td><td>ಈ ಪ್ರಕರಣಗಳ ಪೈಕಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (C.R.E Cell) ತನಿಖೆಗೆ ಒಳಪಡಿಸಲಾದ ಪ್ರಕರಣಗಳ ಸಂಖ್ಯೆ ಹಾಗೂ ಪ್ರಸ್ತುತ ಹಂತದ ಪ್ರಕರಣಗಳ ಸಂಖ್ಯೆ ಹಾಗೂ ತನಿಖೆಯ ವಿವಿಧ ಹಂತಗಳ ಮಾಹಿತಿಯು ಕೆಳಗಿನಂತಿದೆ:-
<table>
<tr><th rowspan="2">ವರ್ಷ</th><th rowspan="2">ದಾಖಲಾಗಿರುವ ನಕಲಿ ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳ ಸಂಖ್ಯೆ</th><th colspan="6">ಪ್ರಕರಣಗಳ ಪ್ರಸ್ತುತ ಹಂತ</th></tr>
<tr><th>Charge sheeted</th><th>B report</th><th>C report</th><th>Stay</th><th>UI</th><th>Disposals</th></tr>
<tr><td>2023</td><td>37</td><td>15</td><td>2</td><td>0</td><td>10</td><td>2</td><td>8</td></tr>
<tr><td>2024</td><td>24</td><td>10</td><td>1</td><td>0</td><td>6</td><td>4</td><td>3</td></tr>
<tr><td>2025</td><td>14</td><td>4</td><td>1</td><td>0</td><td>3</td><td>3</td><td>3</td></tr>
<tr><td>2026</td><td>1</td><td>0</td><td>0</td><td>0</td><td>0</td><td>1</td><td>0</td></tr>
<tr><td>Total</td><td>76</td><td>29</td><td>4</td><td>0</td><td>19</td><td>10</td><td>14</td></tr>
</table></td></tr>
<tr><td>(ಇ)</td><td>ತನಿಖೆಯ ನಂತರ ನಕಲು ಎಂದು ಸಾಬೀತಾಗಿ ವಜಾಗೊಳಿಸಲಾದ (ಸಿಂಧುತ್ವ ರದ್ದುಪಡಿಸಿದ) ಜಾತಿ ಪ್ರಮಾಣ ಪತ್ರಗಳ ಸಂಖ್ಯೆ ಎಷ್ಟು; ತನಿಖೆಯ ಹಂತದಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಖುಲಾಸೆಗೊಂಡ ಅಥವಾ ವಜಾ ಆದ ಪ್ರಕರಣಗಳು ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>ತನಿಖೆಯ ನಂತರ ನಕಲು ಎಂದು ಸಾಬೀತಾಗಿ ವಜಾಗೊಳಿಸಲಾದ (ಸಿಂಧುತ್ವ ರದ್ದುಪಡಿಸಿದ) ಜಾತಿ ಪ್ರಮಾಣ ಪತ್ರಗಳ ಸಂಖ್ಯೆ ಮತ್ತು ತನಿಖೆಯ ಹಂತದಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಖುಲಾಸೆಗೊಂಡ ಅಥವಾ ವಜಾಗೊಂಡ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ತನಿಖೆಯ ನಂತರ ನಕಲು ಎಂದು ಸಾಬೀತಾಗಿ ವಜಾಗೊಳಿಸಲಾದ (ಸಿಂಧುತ್ವ ರದ್ದುಪಡಿಸಿದ) ಜಾತಿ ಪ್ರಮಾಣ ಪತ್ರ ಸಂಖ್ಯೆಗಳ ಸಂಖ್ಯೆ</th><th>ತನಿಖೆಯ ಹಂತದಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಖುಲಾಸೆ ಗೊಂಡ ಅಥವಾ ವಜಾ ಆದ ಪ್ರಕರಣಗಳು</th></tr>
<tr><td>2023</td><td>1</td><td>0</td></tr>
<tr><td>2024</td><td>1</td><td>0</td></tr>
<tr><td>2025</td><td>0</td><td>0</td></tr>
</table></td></tr>
</table>

<table>
<tr><td></td><td></td><td><table><tr><td>2026<br>(31.07.2026)</td><td>1</td><td>0</td></tr><tr><td>ಒಟ್ಟು</td><td>3</td><td>0</td></tr></table></td></tr>
<tr><td>(ಈ)</td><td>ನಕಲಿ ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೌಲಭ್ಯ/ ಉದ್ಯೋಗ ಗಿಟ್ಟಿಸಿಕೊಂಡಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಮತ್ತು ಇಲಾಖಾ ಕ್ರಮ ಜರುಗಿಸಲು ಇರುವ ಕಾನೂನು ಅಚಡಣೆಗಳೇನು: ತನಿಖೆ ಪೂರ್ಣಗೊಂಡರೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ಮತ್ತು ಇಂತಹ ಪ್ರಕರಣಗಳ ತ್ವರಿತ ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಗಂಭೀರ ಕ್ರಮಗಳೇನು?</td><td>ವಿಳಂಬವಾಗುತ್ತಿರುವುದಕ್ಕೆ ಕಾರಣಗಳು ಮತ್ತು ಇಂತಹ ಪ್ರಕರಣಗಳ ತ್ವರಿತ ವಿಲೇವಾರಿಗೆ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:-<br><br>1. ನಕಲಿ ಜಾತಿ ಪ್ರಮಾಣ ಪತ್ರ ಪಡೆದಿರುವ ಬಗ್ಗೆ ವಿಚಾರಣೆ ಮಾಡಲು ಸಂಬಂಧಪಟ್ಟ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸಭೆಯಿಂದ ಆದೇಶ ಆಗಬೇಕಾಗಿರುವುದರಿಂದ ಆ ಹಂತದಲ್ಲಿ ತಡವಾಗುತ್ತಿರುತ್ತದೆ.<br><br>2. ವಿಚಾರಣೆ ಪೂರ್ಣಗೊಂಡ ನಂತರ ವಿಚಾರಣಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸಭೆಗೆ ಸಲ್ಲಿಸಿಕೊಳ್ಳುತ್ತಿದ್ದು, ಅಲ್ಲಿಯೂ ಕೂಡ ವಿಳಂಬವಾಗುತ್ತಿರುವುದು ಕಂಡುಬಂದಿರುತ್ತದೆ.<br><br>3. ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಸಭೆಯು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಲು ಸಂಬಂಧಪಟ್ಟ ತಹಶೀಲ್ದಾರರಿಗೆ ಆದೇಶ ಮಾಡಿದ ಪ್ರಕರಣಗಳಲ್ಲಿ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಆದೇಶಿಸಲು ತಡವಾಗುತ್ತಿರುವುದು ಕಂಡುಬಂದಿರುತ್ತದೆ.<br><br>4. ತಡೆಯಾಜ್ಞೆ ಮತ್ತು ಮೇಲ್ಮನವಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯ/ಮೇಲ್ಮನವಿ ಪ್ರಾಧಿಕಾರವು ಮರು ವಿಚಾರಣೆಗೆ ಆದೇಶಿಸಿದ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿರುವುದು ಕಂಡುಬಂದಿರುತ್ತದೆ.<br><br>5. ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ರದ್ದು ಮಾಡಿದ ಪ್ರಕರಣಗಳಲ್ಲಿ ನಿಯಮಾನುಸಾರ ಕಾನೂನು ಕ್ರಮ ಕೈಗೊಂಡು ತನಿಖಾ ವರದಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿಕೊಳ್ಳಲಾಗುತ್ತಿದೆ.<br><br>6. ವಿಚಾರಣೆ ಹಂತದಲ್ಲಿ ಮತ್ತು ತನಿಖಾ ಹಂತದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಆಗುತ್ತಿರುವುದು ತನಿಖೆ ಹಾಗೂ ವಿಚಾರಣೆಗೆ, ತ್ವರಿತ ವಿಲೇವಾರಿಗೆ ವಿಳಂಬವಾಗುತ್ತಿರುತ್ತದೆ. ವಿಚಾರಣಾ ಹಂತದಲ್ಲಿ ಆಪಾದಿತರ ಮೇಲೆ ಇರುವ ಆರೋಪವನ್ನು ಸಾಬೀತು ಮಾಡಲು ಅವರುಗಳ ಮೂಲ ದಾಖಲಾತಿಗಳು ಮತ್ತು ಮೂಲ ಜಾತಿಗೆ ಸಂಬಂಧಿಸಿದ ಪೂರಕ ಮಾಹಿತಿಯನ್ನು ಪಡೆದುಕೊಳ್ಳಲು ವಿಳಂಬವಾಗುತ್ತಿರುತ್ತದೆ. ಇವುಗಳನ್ನು ಹೊರತುಪಡಿಸಿದ</td></tr>
</table>

| | | |
|---|---|---|
| | | ಪ್ರಕರಣಗಳು ಬಂದಲ್ಲಿ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.<br><br>7. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆಯಲ್ಲಿರುವ ಪ್ರಕರಣಗಳ ತಡೆಯಾಜ್ಞೆ ತೆರವಿಗೆ ಅಫಿಡವಿಟ್ ಮತ್ತು ಕಂಡಿಕೆವಾರು ಷರಾ ಸಲ್ಲಿಸಲಾಗುತ್ತಿದೆ.<br><br>8. ಸುಳ್ಳು ಜಾತಿ ಪ್ರಮಾಣ ಪತ್ರವನ್ನು ನೀಡಿ ಪಡೆದಿರುವ ಸೌಲಭ್ಯವನ್ನು ಹಿಂಪಡೆಯಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪತ್ರ ವ್ಯವಹರಿಸಲಾಗುತ್ತಿದೆ. |

**ಹೆಚ್‌ಡಿ 27 ಎಸ್‌ಡಿಎಸ್ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು.

# ಅನುಬಂಧ – ಅ

| ಕ್ರಸ | ದಾಖಲಾಗಿರುವ ನಕಲಿ ಜಾತಿ ಪ್ರಮಾಣ ಪತ್ರಗಳ ಪ್ರಕರಣಗಳ ಸಂಖ್ಯೆ | ವರ್ಷ | | | |
|---|---|---|---|---|---|
| | | 2023 | 2024 | 2025 | 2026 |
| 1. | ಬೆಂಗಳೂರು ನಗರ | 1 | 4 | 1 | 0 |
| 2. | ತುಮಕೂರು | 0 | 1 | 0 | 0 |
| 3. | ಕೋಲಾರ | 9 | 0 | 0 | 0 |
| 4. | ಬೆಂಗಳೂರು ಗ್ರಾಮಾಂತ | 3 | 2 | 1 | 0 |
| 5. | ಬೆಂಗಳೂರು ದಕ್ಷಿಣ ಜಿಲ್ಲೆ | 0 | 0 | 0 | 0 |
| 6. | ಚಿಕ್ಕಬಳ್ಳಾಪುರ | 0 | 0 | 0 | 0 |
| 7. | ಶಿವಮೊಗ್ಗ | 1 | 2 | 1 | 0 |
| 8. | ಚಿತ್ರದುರ್ಗ | 0 | 0 | 2 | 0 |
| 9. | ದಾವಣಗೆರೆ | 0 | 0 | 0 | 0 |
| 10. | ಹಾವೇರಿ | 0 | 0 | 0 | 0 |
| 11. | ದಕ್ಷಿಣ ಕನ್ನಡ | 0 | 0 | 0 | 0 |
| 12. | ಉತ್ತರ ಕನ್ನಡ | 0 | 0 | 0 | 0 |
| 13. | ಉಡುಪಿ | 0 | 0 | 0 | 0 |
| 14. | ಚಿಕ್ಕಮಗಳೂರು | 0 | 0 | 0 | 0 |
| 15. | ಮೈಸೂರು | 2 | 3 | 1 | 0 |
| 16. | ಕೊಡಗು | 2 | 2 | 2 | 1 |
| 17. | ಚಾಮರಾಜನಗರ | 1 | 0 | 0 | 0 |
| 18. | ಹಾಸನ | 1 | 0 | 0 | 0 |
| 19. | ಮಂಡ್ಯ | 2 | 0 | 0 | 0 |
| 20. | ಕಲಬುರಗಿ | 0 | 0 | 5 | 0 |
| 21. | ಯಾದಗಿರಿ | 0 | 1 | 0 | 0 |
| 22. | ಬೀದರ | 2 | 1 | 0 | 0 |
| 23. | ಬಳ್ಳಾರಿ | 1 | 0 | 0 | 0 |
| 24. | ವಿಜಯನಗರ | 0 | 1 | 0 | 0 |
| 25. | ರಾಯಚೂರು | 2 | 1 | 0 | 0 |
| 26. | ಬೆಳಗಾವಿ | 6 | 1 | 1 | 0 |
| 27. | ಧಾರವಾಡ | 3 | 1 | 0 | 0 |
| 28. | ವಿಜಯಪುರ | 1 | 3 | 0 | 0 |
| 29. | ಗದಗ | 0 | 1 | 0 | 0 |
| 30. | ಬಾಗಲಕೋಟೆ | 0 | 0 | 0 | 0 |
| | ಒಟ್ಟು | 37 | 24 | 14 | 1 |